

ಚಿತ್ರ: ಆದಿತ್ಯ ಜಿ. ತಿಳಿ

ತೆರೆದುಕೊಳ್ಳುತ್ತದೆ. ಒಂದೆಡೆ ದೇವಸ್ಥಾನಗಳಲ್ಲಿ ಉತ್ಸವಗಳು ಆರಂಭವಾದರೆ, ಮತ್ತೊಂದೆಡೆ ಯಕ್ಷಗಾನ ಮೇಳಗಳು ಹೊರಡುತ್ತವೆ. ಮಗದೊಂದೆಡೆ ನಾಗಾರಾಧನೆಯ ಉತ್ಸವವೂ ಗರಿಬಿಚ್ಚಿಕೊಳ್ಳುತ್ತದೆ. ಬ್ರಹ್ಮಕಲಶ, ಹೊರೆಕಾಣಿಕೆಯ ಮೆರವಣಿಗೆಗಳು, ಬಂಡಿ, ಉರುಸ್, ಸಾಂತ್‌ಮಾರಿ, ದೀಪೋತ್ಸವ, ಕಂಬಳ, ದೈವಾರಾಧನೆಯ ಸಂಭ್ರಮಗಳು... ಹೀಗೆ ಆರಾಧನೆ ಎಂಬ ಪರಿಕಲ್ಪನೆಯ ಅಮಿತ ಸಾಧ್ಯತೆಗಳನ್ನು ಅನಾವರಣಗೊಳಿಸುವಲ್ಲಿ ಕರಾವಳಿಯು ಮುಂಚೂಣಿಯಲ್ಲಿರುತ್ತದೆ. ಪ್ರತಿ ರಾತ್ರಿಯೂ ಒಂದಲ್ಲ ಒಂದು ಆಚರಣೆಯು ನಡೆಯುತ್ತಿರುವುದರಿಂದ, ಇಡೀ ರಾತ್ರಿ ಬೆಳಕಾಗಿರುವುದು ಇಲ್ಲಿ ಸಾಮಾನ್ಯ. ವೃಷಭ ಮಾಸದ ಹತ್ತನೇ ದಿನದವರೆಗೆ (ಅಂದಾಜು ಮೇ 24ರ ಸುಮಾರಿಗೆ) ಈ ಆರಾಧನೆಯ ಪರ್ವವು ಮುಕ್ತಾಯವಾಗುತ್ತದೆ. ಎಲ್ಲ ಆರಾಧನೆಗಳ ಬೆನ್ನೆಲುಬೂ ಭತ್ತದ ಕೃಷಿಯೇ ಆಗಿದ್ದುದರಿಂದ, ವೃಷಭ ಮಾಸದಲ್ಲಿ ಎಲ್ಲರೂ ಮಳೆಗಾಲವನ್ನು ಎದುರುಗೊಳ್ಳಲು ಸಿದ್ಧತೆ ಶುರು ಮಾಡಿಕೊಳ್ಳುತ್ತಿದ್ದರು.

ಈ ಸುದೀರ್ಘವಾದ ಪರ್ವದಲ್ಲಿ ಯಕ್ಷಗಾನ ಮತ್ತು ದೈವಾರಾಧನೆಯೇ ಸಿಂಹಪಾಲು ಪಡೆಯುತ್ತದೆ. ಯಕ್ಷಗಾನ ಮೇಳಗಳು ದೇಶದ ಎರಡು ಮಹಾಕಾವ್ಯಗಳ ಕಥೆಗಳನ್ನು ಜನರ ಬಳಿಗೆ ಕೊಂಡೊಯ್ಯುವ ಕಾಯಕದಲ್ಲಿ ತೊಡಗಿಕೊಂಡಿದ್ದರೆ, ದೈವಾರಾಧನೆಯು ಕರಾವಳಿಯ ಮೂಲ ನಂಬಿಕೆಗಳನ್ನು, ತುಳುವರ ಅಸ್ಮಿತೆಯನ್ನು ಕಲಾತ್ಮಕವಾಗಿ ಪ್ರಕಟಪಡಿಸಿ ಮುಂದಕ್ಕೊಯ್ಯುವ ಕಾಯಕ ಮಾಡುತ್ತವೆ.

ಕರಾವಳಿಯನ್ನು ಹೊರತುಪಡಿಸಿದ ಪ್ರದೇಶಗಳಲ್ಲಿ ಕೋಲ ಅಥವಾ ನೇಮಗಳ ಆಕರ್ಷಕ ಕುಣಿತ ಮತ್ತು ನುಡಿ ಹೇಳುವಿಕೆಯ ಮೂಲಕ ದೈವಾರಾಧನೆಯ ಪರಿಚಯವಾಗಿದೆ. ಆದರೆ ದೈವಗಳನ್ನು ನಂಬುವ ಮನೆಯೊಂದರಲ್ಲಿ ಆಚರಣೆಗಳು ಇನ್ನೂ ದಟ್ಟವಾಗಿರುತ್ತವೆ. ಅದು ತುಳುನಾಡಿನಲ್ಲಿ ವಾಸವಾಗಿರುವ ಎಲ್ಲ ಜನರಿಗೆ, ಅಂದರೆ ಜಾತಿ ಧರ್ಮದ ಹಂಗಿಲ್ಲದೆ ಎಲ್ಲ ವರ್ಗದವರಿಗೂ ತಮ್ಮ ಉಸಿರಾಟವಿದ್ದಂತೆ. ದೈವವನ್ನು ನಂಬುವ ಮನೆಯ ಪ್ರತಿಯೊಂದು ಆಚಾರ ವಿಚಾರಗಳ ಕೇಂದ್ರಬಿಂದು ಆ ದೈವವೇ. ದೂರದ ಊರಿನಲ್ಲಿ ಎಂಜಿನಿಯರಿಂಗ್ ಓದುವ ಮನೆಯ ಮಕ್ಕಳಾದರೂ, ಅವರು ಮನೆಯ ದೈವಕ್ಕೆ ಅರಿಕೆ ಮಾಡಿಕೊಂಡು ತನ್ನ ಜೀವನದ ಮುಖ್ಯ ನಿರ್ಧಾರ ಮಾಡುತ್ತಾರೆ. ದೇವರ ದೇವಸ್ಥಾನವಿದ್ದಂತೆ ದೈವದ ದೈವಸ್ಥಾನದಲ್ಲಿ ಒಂದು ಪುಟ್ಟ ಮಂಚವನ್ನು ತೂಗು ಹಾಕಿ, ಅಲ್ಲಿ ಪ್ರತಿದಿನ ಬೆಳಗ್ಗೆ ಹೂವು ಮತ್ತು ನೀರನ್ನು ಮನೆಯ ಯಜಮಾನ ನೀಡುತ್ತಾನೆ. ಮನೆಗೆ ಸಂಬಂಧಿಸಿದ ಯಾವುದೇ ಕೆಲಸ ಕಾರ್ಯಗಳನ್ನು ಅರಿಕೆ ಮಾಡಿಕೊಂಡು ದೈವದ ಅನುಗ್ರಹ ಬೇಡುವುದು ವಾಡಿಕೆ.

### ದೈವಕ್ಕೆ ಅಣಿ ಕಟ್ಟುವ ಕೌಶಲ



ದೈವಗಳಿಗೆ ಅಣಿಗಳನ್ನು (ಪ್ರಭಾವಳಿ ಮಾದರಿಯ ಕಿರೀಟ) ಕಟ್ಟುವುದು ಒಂದು ಸುಂದರ ಕೌಶಲ. ಇದು ನೇಮ, ಕೋಲಗಳನ್ನು ನಿರ್ವಹಿಸುವ ಸಮುದಾಯಕ್ಕೆ ಒಲಿದು ಬಂದಿರುವ ಕೌಶಲವೆಂದರೂ ತಪ್ಪಲ್ಲ. ತೆಂಗಿನ ಮರದ ಬೆಳ್ಳನೆಯ ಚಿಗುರೆಲೆ (ತಿರಿ)ಯನ್ನು ಸಂಗ್ರಹಿಸಿ ಅದರಿಂದ ದೈವಕ್ಕೆ ಕಿರೀಟವನ್ನು, ಧರಿಸುವ ಭೂಷಣಗಳನ್ನು ನೇಮದ ದಿನವೇ ತಯಾರಿಸಲಾಗುತ್ತದೆ. ನೇಮ/ಕೋಲದ ಹರಕೆಯನ್ನು ಮಾಡಿಕೊಳ್ಳುವಾಗ ಮನೆ ಯಜಮಾನ, 'ನಿನಗೆ ಸಿರಿ ಸಿಂಗಾರದ ಸೇವೆಯನ್ನು ಅರ್ಪಿಸುತ್ತೇನೆ' ಎಂದು ಹೇಳಿಕೊಳ್ಳುವುದು ವಾಡಿಕೆ. ಹಾಗಿದ್ದರೆ ಈ ತೆಂಗಿನ ತಿರಿಯನ್ನು ಬಳಸಿಯೇ ಅಲಂಕಾರ ಮಾಡಬೇಕಲ್ಲವೇ? ಕಾಡಿನ ಹೂಗಳಿಂದಲೇ ಅಲಂಕಾರ ಮಾಡಬೇಕಲ್ಲವೇ? ಈಗೀಗ ಹಣದ ಹರಿವು ಯಥೇಷ್ಟವಾಗಿರುವುದರಿಂದ ಚಿನ್ನ ಬೆಳ್ಳಿಗಳ ಬಳಕೆ ಹೆಚ್ಚಿದೆ. ಆದರೆ ದೈವದ ರೂಪವನ್ನು ಯಾರು ಕಂಡಿದ್ದಾರೆ. ಮನುಷ್ಯರ ಭಾವನೆಗೆ ತಕ್ಕಂತೆ ಹಿರಿಯರು ಮಾಡಿರುವ ಕ್ರಮದಲ್ಲಿ ನಡೆಯುವುದಲ್ಲದೆ, ನಮ್ಮ ಸಂಪತ್ತನ್ನು ದೈವಗಳ ಮುಂದೆ ತೋರುಗಾಣಿಕೆ ಮಾಡುವುದು ಸರಿಯಲ್ಲ. ಅಣಿ ಕಟ್ಟುವ ಕೌಶಲವನ್ನು ಮುಂದಿನ ತಲೆಮಾರಿಗೂ ದಾಟಿಸುವುದು ನಮ್ಮ ಕರ್ತವ್ಯವಾಗಿದೆ.

**–ಆನಂದ ನಲಿಕೆ**

**ಕುಂಟಾಲ ಪಲ್ಕೆ, ದೈವನರ್ತಕ, ಮುಂಡಾಜೆ**